ಮಾತಾಡಿದಳು.

'ನೀವು ಕೂತಿರಿ. ಇವನಿಗೆ ಹಾಲು ಕುಡಿಸಿ ನಿಮಗೆ ಊಟಕ್ಕೆ ರೆಡಿ ಮಾಡಿ ಕರಿತೀನಿ. ಹೊತ್ತಾಯಿತು. ಇನ್ನು ನೀವು ಹೊರಡೋದೇ ಸರಿ' ಅಂದು ಹೆಗಲ ಮೇಲೆ ಕೈಯಿಟ್ಟು ಹೊರಟುಹೋದಳು.

ನಾನು ತುಂಬಾ ಹೊತ್ತಿನವರೆಗೆ ಹಾಗೇ ಇದ್ದು ಬಿಟ್ಟೆ.

ಟೈಮ್ ನೋಡಿಕೊಂಡೆ. ಹತ್ತು.

ಸ್ವಲ್ಪ ಹೊತ್ತು ದಾರಿ ನೋಡಿ ಉಳಿದ ಜಿನ್ನು ಅಷ್ಟನ್ನೂ ಗ್ಲಾಸಿಗೆ ಸುರಿದುಕೊಂಡು ಕೂತೆ.

ಹತ್ತೂವರೆ.

ಆಕೆ ಬರಲಿಲ್ಲ.

ಹಾಲ್‌ನಲ್ಲಿ ಲೈಟ್ ಆಫ್ ಆಗಿ ಬೆಡ್‌ಲ್ಯಾಂಪ್ ಹತ್ತಿದ್ದು ಕಾಣಿಸಿತು. ಡೋರ್ ಹತ್ತಿರ ಹೋಗಿ ನೋಡಿದರೆ ಚಿನ್ನೂನ ರೂಮಲ್ಲಿ ಕೂಡ ಲೈಟ್ ಆಫ್ ಆಗಿತ್ತು. ಕದ ಅರ್ಧ ಮುಚ್ಚಿದ ಆ ಕೋಣೆಯಲ್ಲಿ ಆಕೆ ಚಿನ್ನುನನ್ನು ಮಲಗಿಸುತ್ತಿದ್ದಾಳೋ ಅಥವಾ ಮತ್ತಿನಲ್ಲಿ ಆಕೆ ಕೂಡಾ ನಿದ್ದೆ ಮಾಡ್ತಿದ್ದಾಳೋ ಅರ್ಥವಾಗಲಿಲ್ಲ.

ಮತ್ತೊಂದು ಕಾಲು ಗಂಟೆ ನೋಡಿ ಇನ್ನು ಹೊರಟುಹೋಗೋದೇ ವಾಸಿ ಅಂತ ಅಂದುಕೊಳ್ತಿರಬೇಕಾದರೆ ಆಕೆ ಸಣ್ಣಗೆ ಅಳುತ್ತ ಮೂಗೊರೆಸಿಕೊಳ್ಳುತ್ತ ಬಂದಳು.

'ಏನ್ರೀ ಏನಾಯ್ತು?' ಅಂದೆ ಕಂಗಾಲಾಗಿ.

'ಬುದ್ಧಿಯಿಲ್ಲದೋನಿಗೆ ಪಿಲ್ಸ್ ಕೊಟ್ಟು ಮಲಗಿಸಿ ಬರ್ತಿದೀನಿ.'

'ಆ...'

'ಹೌದೂರೀ. ಇಲ್ಲಾಂದ್ರೆ ಅವನು ಕೇಳಲ್ಲ. ಮಲಗಲ್ಲ. ಅಸಲಿಗೆ ಇಷ್ಟು ಹೊತ್ತು ನಿಮ್‌ಜೊತೆ ಮಾತಾಡೋಕೆ ಬಿಟ್ಟಿದ್ದೇ ಹೆಚ್ಚು ಅವನು. ಹಾಲಿನಲ್ಲಿ ನಿದ್ರೆ ಮಾತ್ರೆ ಕಲಸಿಕೊಟ್ಟೆ. ನನ್ನ ಕರ್ಮ. ಯಾವ ತಾಯಿಗೂ ಇಂಥ ಶಿಕ್ಷೆ ಬೇಡ' ಅಂದಳಾಕೆ ಒಣಕಣ್ಣುಗಳಿಂದ ಅಳುತ್ತ.

ನನಗೆ ತಲೆ ಕೆಟ್ಟುಹೋಯಿತು.

'ಸಮಾಧಾನ ಮಾಡ್ಕೊಳ್ಳಿ... ಸುಮ್ಮನಾಗಿ...' ಇನ್ನೇನು ಹೇಳಬೇಕೋ ತಿಳಿಯದೆ.

'ಯಾಕ್ರೀ ಹಾಗ್ಮಾಡಿದಿರಿ? ನಾವು ಮತ್ಯಾವಾಗಲಾದ್ರೂ ಭೇಟಿಯಾಗಬಹುದಿತ್ತಲ್ಲ?'

'ಹಾಗಲ್ಲರೀ... ಇವತ್ತು ನನ್ನ ಮನಸಲ್ಲಿ ಇರೋದೆಲ್ಲ ಹೇಳಿಕೊಂಡು ಬಿಡಬೇಕು. ಎಷ್ಟು ದಿನಗಳ ಹೊರೆಯೋ ಇದು' ಅಂದಳಾಕೆ.

ಇದ್ದಕ್ಕಿದ್ದಂತೆ ಆಕೆ ಮುಖ ಗಂಭೀರವಾಗಿ ಬದಲಾಯಿತು. ಕುರ್ಚಿ ಮೇಲೆ ಕುಳಿತುಕೊಂಡು ಚಕ್ಕಳಮಕ್ಕಳ ಹಾಕಿಕೊಳ್ಳುತ್ತ ಅಂದಳು:

'ನಿಮಗೆ ಮತ್ತೆ ನಮ್ಮ ಅಪ್ಪನ ಕತೆ ಮೊದಲಿನಿಂದ ಹೇಳಬೇಕ್ರೀ. ಹಜಾಮರ ಡಾಕ್ಟರ್ ಕತೆ ಬೇಕಂದ್ರಲ್ಲ. ಹೇಳೂಂತೀರಾ?

ಇದು ನಾನು ಸಣ್ಣವಳಿರುವಾಗ ಬೆಳಕಿನಲ್ಲಿ ನೋಡಿದ ಕತೆಯಲ್ಲ. ಕಣ್ಣು ಹೋಗಿ ಕತ್ತಲಿನಲ್ಲಿದ್ದಾಗ ನೋಡಿದ ಕತೆ. ನನ್ನ ಅದೃಷ್ಟ. ಆ ಕತ್ತಲೇ ನನಗೆ ಸಾಕಷ್ಟು ಬೆಳಕು ಕೊಟ್ಟಿದ್ದು. ನಡೆದುಬಂದ ನನ್ನ ಜೀವನವನ್ನಷ್ಟೇ ಅಲ್ಲ, ಗತಿಸಿಹೋದ ನಮ್ಮ ಅಪ್ಪನ ಜೀವನವನ್ನು ಕೂಡ ತುಲನೆ ಮಾಡಿ ನೋಡಲು ಬೇಕಾದ ಜ್ಞಾನವನ್ನು ನನಗದು ಕರುಣಿಸಿತು. ಆ ರೀತಿಯಿಂದ ಅದು ನನಗೆ ಸಾಕಷ್ಟು ಒಳ್ಳೆಯದು ಮಾಡಿತು. ಇಲ್ಲದಿದ್ದರೆ ನನಗೆ ನಮ್ಮಪ್ಪ ಅರ್ಥವಾಗ್ತಿರಲಿಲ್ಲ.'